# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

# कर्नाटक–संस्कृत–विश्वविद्यालयः

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸ್ನಾ.ಹಾಗೂ ಸ್ನಾ.ಪ/ವಿ.ಪ/2018–19 ದಿನಾಂಕ: 10/01/2019

## ಅಧಿಸೂಚನೆ

ವಿಷಯ: 2018–19 ನೇ ಸಾಲಿನ ಸಂಸ್ಕೃತ ಎಂ.ಎ ಪ್ರಥಮ & ತೃತೀಯ ಸೆಮೆಸ್ಟರ್ ಪರೀಕ್ಷೆಗಳ (ಪರಿಸರ) ಮರುಮೌಲ್ಯಮಾಪನ / ಮರುಎಣಿಕೆಗಳಿಗಾಗಿ ಕುರಿತು ಅಧಿಸೂಚನೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018–19 ನೇ ಸಾಲಿನ ನವೆಂಬರ್–ಡಿಸೆಂಬರ್ 2018 ರ ಮಾಹೆಯಲ್ಲಿ ನಡೆದ ಪರಿಸರ ವಿದ್ಯಾರ್ಥಿಗಳಿಗೆ ಸಂಸ್ಕೃತ ಎಂ.ಎ ಪ್ರಥಮ & ತೃತೀಯ ಸೆಮೆಸ್ಟರ್ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದ್ದು, ಮರುಮೌಲ್ಯಮಾಪನ ಮತ್ತು ಮರು ಎಣಿಕೆಗಳಿಗಾಗಿ ಅರ್ಜಿ ಸಲ್ಲಿಸಲು ಈ ಅಧಿಸೂಚನೆ ಹೊರಡಿಸಲಾಗಿದೆ. ಮರುಮೌಲ್ಯಮಾಪನ/ಮರುಎಣಿಕೆಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಈ ಕೆಳಕಂಡ ಸೂಚನೆಯ ಅನುಸಾರ ಅರ್ಜಿ ಸಲ್ಲಿಸಬೇಕಾಗಿದೆ.

1. ಶುಲ್ಕದ ವಿವರ–
   - ಮರುಮೌಲ್ಯಮಾಪನಕ್ಕಾಗಿ – ರೂ. 1200/–
   - ಮರುಎಣಿಕೆಗಾಗಿ – ರೂ. 500/–
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30/01/2019 ದ ಒಳಗಾಗಿ ವಿಶ್ವವಿದ್ಯಾಲಯಕ್ಕೆ ತಲುಪುವಂತೆ ಅರ್ಜಿ ಸಲ್ಲಿಸುವುದು.
3. ಅರ್ಜಿಗಳನ್ನು ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರಿಂದ ಕಡ್ಡಾಯವಾಗಿ ದೃಢೀಕರಿಸಿ ಕಳುಹಿಸಬೇಕು.
4. ಕೃಪಾಂಕದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.
5. ಅರ್ಜಿಗಳನ್ನು "ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು–18." ಈ ಹೆಸರಿನಲ್ಲಿಯೇ ಡಿ.ಡಿ (ಬ್ಯಾಂಕ್ ಹುಂಡಿ) ಯನ್ನು ಸ್ವೀಕರಿಸಿ ಅರ್ಜಿಯ ಜೊತೆ ಸಲ್ಲಿಸಬೇಕು.
6. ಅರ್ಜಿಗಳನ್ನು "ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18" ಈ ವಿಳಾಸಕ್ಕೆ ಸಲ್ಲಿಸಬೇಕು.
7. ನಿಗದಿತ ಅರ್ಜಿಗಳನ್ನು ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯತಕ್ಕದ್ದು. www.ksu.ac.in (home page/bottom page/for students/forms ಇಲ್ಲಿಂದ ಅರ್ಜಿಗಳನ್ನು download ಮಾಡಿ ಸಲ್ಲಿಸತಕ್ಕದ್ದು.

**Sd/-**
ಪರೀಕ್ಷಾ ನಿಯಂತ್ರಕರು